ಕಠಿಣ ಕೆಲಸಗಳನ್ನು ಮಾಡುವ ಹೆಂಚಿನ ಕಾರ್ಖಾನೆ ಕಾರ್ಮಿಕರಿಗೆ ಈ ಪರಿಹಾರವನ್ನು ಒದಗಿಸುವುದರಲ್ಲಿ ಸರ್ಕಾರ ಹಿಂದೆ ಮುಂದೆ ನೋಡುತ್ತಿದೆ.

ಈ ಕೂಡಲೇ ಹೆಂಚಿನ ಕಾರ್ಖಾನೆ ಕಾರ್ಮಿಕರ ಸಮಸ್ಯೆ ಅಧ್ಯಯನಕ್ಕೆ ತ್ರಿಪಕ್ಷೀಯ ಸಮಿತಿ ರಚಿಸ ಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸರ್ಕಾರ ಒಂದು ತೀರ್ಮಾನ ಮಾಡಿ ಕನಿಷ್ಠ ವೇತನ ಕೊಡಬೇಕೆಂದು ತೀರ್ಮಾನ ಆಗಿತ್ತು. ಅದು ಕೋರ್ಟಿಗೆ ಹೋಗಿ ಸ್ವಲ್ಪ ತಡವಾಗಿದೆ. ಅದಕ್ಕೋಸ್ಕರ ಕಮಿಟಿಯನ್ನು ಈಗಾಗಲೇ ರಚನೆ ಮಾಡಿದ್ದೇವೆ. ಆದಷ್ಟು ಜಾಗ್ರತೆ ಕಮಿಟಿಯನ್ನು ಕರೆಸಿ ಚರ್ಚೆ ಮಾಡಿ ಇದನ್ನು ತೀರ್ಮಾನ ಮಾಡಿಸುತ್ತೇನೆ.

ಕಂದೂರೆಮೋತಿ ಪ್ರಕರಣದ ಬಗ್ಗೆ ವರದಿಯನ್ನು ಪಂಡಿಸಲು ಹೆಚ್ಚಿನ ಕಾಲಾವಕಾಶವನ್ನು ಕೋರುವ ಪ್ರಸ್ತಾವ.

ಶ್ರೀ ಹೆಚ್.ಟಿ. ಕೃಷ್ಣಪ್ಪ (ನಾಗಮಂಗಲ) —ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಪ್ರಸ್ತಾವನೆಯನ್ನು ಸಭೆಯ ಅಂಗೀಕಾರಕ್ಕಾಗಿ ಮಂಡಿಸುತ್ತೇನೆ.

''ರಾಯಚೂರು ಜಿಲ್ಲೆಯ ಕುದುರೆಮೋತಿಯಲ್ಲಿ ೧೯೮೫ನೇ ಜೂನ್ ೧೧ ರಂದು ನಡೆದ ಘಟನೆಯ ಸಂಬಂಧದಲ್ಲಿ ಅಧ್ಯಯನ ಮಾಡಲು ರಚಿಸಿದ ವಿಶೇಷ ಸಮಿತಿ ವರದಿಯನ್ನು ಒಪ್ಪಿಸಲು ನಿಗದಿ ಮಾಡಿದ್ದ ಕಾಲಾವಧಿಯನ್ನು ೧೯೮೫ನೇ ಆಗಸ್ಟ್ ೩೦ರವರೆಗೆ ವಿಸ್ತರಿಸಬೇಕೆಂದು ಸೂಚಿಸುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ರಾಯಚೂರು ಜಿಲ್ಲೆಯ ಕುದುರೆಮೋತಿಯಲ್ಲಿ ೧೯೮೫ನೇ ಜೂನ್ ೧೧ ರಂದು ನಡೆದ ಘಟನೆಯ ಸಂಬಂಧದಲ್ಲಿ ಅಧ್ಯಯನ ಮಾಡಲು ರಚಿಸಿದ ವಿಶೇಷ ಸಮಿತಿ ವರದಿಯನ್ನು ಒಪ್ಪಿಸಲು ನಿಗದಿ ಮಾಡಿದ್ದ ಕಾಲಾವಧಿಯನ್ನು ೧೯೮೫ನೇ ಆಗಸ್ಟ್ ೩೦ರವರೆಗೆ ವಿಸ್ತರಿಸ ಬೇಕೆಂದು ಅನುಮತಿ ಕೋರಿರುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಮನವಿ

ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ೧೨ ಜನ ಹರಿಜನರು ಆಮರಣಾಂತ ಉಪವಾಸ ಸತ್ಯಾಗ್ರಹ ಕುಳಿತಿರುವ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು ಬೆಳಗಾಂ ಜಿಲ್ಲೆಯ ಬೈಲಹೊಂಗಲದ ವಿಚಾರವನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಅಲ್ಲಿ ೧೨ ಜನ ಹರಿಜನರು ಜಾಲಿ ಕೊಪ್ಪ ಗ್ರಾಮದಲ್ಲಿ ಆಮರಣಾಂತ ಉಪವಾಸ ಕುಳಿತಿರುವ ಬಗ್ಗೆ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಜಾಲಿಕೊಪ್ಪ ಗ್ರಾಮದಲ್ಲಿ ೧೨ ಜನ ಹರಿಜನರು ಆಮರಣಾಂತ ಉಪವಾಸ ಕೂತಿದ್ದಾರೆ ಹನ್ನೆರಡು ಜನರು ಆಗಲೇ ನಿಶ್ಶಕ್ತರಾಗಿದ್ದಾರೆ. ಕೆಲವರ ಜೀವಕ್ಕೆ ಇವತ್ತೋ ನಾಳೆಯೋ ಎನ್ನುವಂತಹ ಪರಿಸ್ಥಿತಿ ಬಂದಿರತಕ್ಕಂಥ ವಿಚಾರ. ಹನ್ನೆರಡು ಜನರು ಕೂಡ ಹರಿಜನರಾಗಿದ್ದಾರೆ. ಮನೆ ಕಟ್ಟುವುದಕ್ಕೆ ಜಾಗ ಕೇಳಿ ಆಮರಣಾಂತ ಉಪವಾಸ ಕೂತುಬಿಟ್ಟಿದ್ದಾರೆ. ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ಮಾನ್ಯ ಎಂ.ಎಸ್. ಪಾಟೀಲರು ಅವರು ಎತ್ತಿದಂತಹ ವಿಚಾರ ಹೇಳಿದರು ಹೇಳಿಕೆಯು ಇವತ್ತಿನವರೆಗೂ ಬಂದಿಲ್ಲ. ಅಲ್ಲಿ ಅನ್ಯಾಯವಾಗುತ್ತಿದೆ ಎನ್ನತಕ್ಕಂಥ ವಿಚಾರ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇವತ್ತೇ ಹೇಳಿಕೆ ಬಂದರೆ ಒಳ್ಳೆಯದು. ಜೀವಕ್ಕೆ ಅಲ್ಲಿ ಪ್ರಾಣ ಭಯ ಇರತಕ್ಕಂಥ ವಿಚಾರ. ಇದರಲ್ಲಿ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ಒಳ್ಳೆಯದು. ತಡವಾಡಿದರೆ ಜೀವಕ್ಕೆ ಪ್ರಾಣಾಪಾಯ ಆಗುತ್ತದೆ.

ಅಧ್ಯಕ್ಷರು.—ನಿನ್ನೆ ಎಂ.ಎಸ್. ಪಾಟೀಲರು ರೈಸ್ ಮಾಡಿದ್ದರಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ಉತ್ತರ ಕೊಡಲಿಲ್ಲ.